ಶ್ರೀ ರತ್ನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

(ನೋಂದಣಿ ಸಂಖ್ಯೆ: ಯು.ಬಿ.ಸಿ.- 1/428/ಆರ್.ಜಿ.ಎನ್/49106/2016-17 ದಿನಾಂಕ: 23-11-2017)

ಸ್ಥಾಪನೆ-2017

# 2020-21ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಹಾಗೂ ಆರ್ಥಿಕ ತಃಖ್ತೆಗಳು (ವರ್ಚ್ಯುಯಲ್ ಸಭೆ)

**ದಿನಾಂಕ: 13-11-2021, ಶನಿವಾರ**

**ಬೆಳಗ್ಗೆ; 10:30 ಕ್ಕೆ**

ಸ್ಥಾಪನೆ:2017

ದೂರವಾಣಿ ಸಂಖ್ಯೆ: 080-26324649
ಇ- ಮೇಲ್:srirathna0318@gmail.com
Website:www.srirathnacreditsociety.com

# ಶ್ರೀ ರತ್ನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ಸರ್ವೆ ನಂ: 26/5, ಮೊದಲನೇ ಮಹಡಿ, ನ್ಯೂ ಬ್ಯಾಂಕ್ ಕಾಲೋನಿ, ಅಮೃತನಗರ ಮುಖ್ಯ ರಸ್ತೆ, ಕೋಣನಕುಂಟೆ, ಬೆಂಗಳೂರು-560062.

## 4 ನೇ ವಾರ್ಷಿಕ ಸದಸ್ಯರ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೆ,

ಶ್ರೀ ರತ್ನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಇದರ **ನಾಲ್ಕನೇ ವಾರ್ಷಿಕ ಸಾಮಾನ್ಯ ವರ್ಚ್ಯುಯಲ್ ಸಭೆಯನ್ನು** ದಿನಾಂಕ: **13-11-2021** ನೇ ಬೆಳಗ್ಗೆ: **10.30** ಕ್ಕೆ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಕರೆಯಲಾಗಿದೆ. ತಾವುಗಳು ಸಕಾಲದಲ್ಲಿ ವರ್ಚ್ಯುಯಲ್ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ.ಲಕ್ಷ್ಮಣ್ ಅವರು ಸಭೆಯ ಆಧ್ಯಕ್ಷತೆಯನ್ನು ವಹಿಸಲಿದ್ದಾರೆ.**

**ವಿಷಯಗಳು**

1. ಪ್ರಾರ್ಥನೆ
2. ಸ್ವಾಗತ ಭಾಷಣ
3. 4ನೇ (2020-21) ಸಾಮಾನ್ಯ ಸಭೆಯ ತಿಳುವಳಿಕೆ ಪತ್ರವನ್ನು ಓದಿ ದಾಖಲಿಸುವುದು.
4. ದಿನಾಂಕ: 19-12-2020 ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು.
5. 2020-21ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ.
6. 2021-22ನೇ ಸಾಲಿಗೆ ಆಯವ್ಯಯ ಹಾಗೂ ಗುರಿ ನಿಗದಿಪಡಿಸಿರುವುದರ ಪ್ರಸ್ತಾವನೆ ಹಾಗೂ ಅನುಮೋದನೆ.
7. 2020-21 ಸಾಲಿನ ನಿವ್ವಳ ಲಾಭದ ವಿಲೇವಾರಿ.
8. 2020-21 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ/ ಅನುಪಾಲನಾ ವರದಿಯೊಂದಿಗೆ ಪರಿಶೀಲನೆ ಹಾಗೂ ಅನುಮೋದನೆ.
9. 2021-22ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿಯ ಬಗ್ಗೆ ಪ್ರಸ್ತಾವನೆ.
10. ಉಪವಿಧಿಗಳ ತಿದ್ದುಪಡಿ (ಇದ್ದಲ್ಲಿ)
11. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು(ಇದ್ದಲ್ಲಿ).
12. ವಂದನಾರ್ಪಣೆ.

ಆಡಳಿತ ಮಂಡಲಿ ಅಪ್ಪಣೆಯ ಮೇರೆಗೆ
ಸಹಿ/-

ಸಂತೋಷ್.ಜೆ
ಮು.ಕಾ.ನಿ. ಅಧಿಕಾರಿ (ಪ್ರಭಾರ)

ಸ್ಥಳ: ಬೆಂಗಳೂರು
ದಿನಾಂಕ: 25-10-2021

**ಸೂಚನೆ:-**

- ಸಭೆಯಲ್ಲಿ ಸದಸ್ಯರು ಮಾತ್ರ ಭಾಗವಹಿಸಲು ಅರ್ಹರು.
- ಮಾನ್ಯ ಸದಸ್ಯರು ದಯಮಾಡಿ ಸೂಚನಾ ಪತ್ರವನ್ನು ಸಭೆ ನಡೆಯುವಾಗ ತಮ್ಮೊಂದಿಗೆ ಹೊಂದಿರಬೇಕಾಗಿ ಪ್ರಾರ್ಥನೆ.
- ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು ಸಭೆಯ ದಿನಾಂಕಕ್ಕೆ ಮೂರು ದಿನಗಳ ಮುಂಚಿತವಾಗಿ ಮುಖ್ಯ ಕಾರ್ಯ ನಿರ್ವಾಹಕರಿಗೆ ಲಿಖಿತ ರೂಪದಲ್ಲಿ ಅಥವಾ/ ವಾಟ್ಸ್‌ಆಪ್/ಇ-ಮೇಲ್ ಮುಖಾಂತರ ಕಳುಹಿಸಲು ವಿನಂತಿಸಲಾಗಿದೆ. ನಂತರ ಬರುವ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿಲ್ಲ.

**ವಿಶೇಷ ಸೂಚನೆ:**

ಈ ಕೆಳಂಡ ವಿಷಯಗಳನ್ನು ಕುರಿತಾದ ವಿವರವಾದ ಮಾಹಿತಿಗಳನ್ನು ಒಳಗೊಂಡ ಮುದ್ರಿತ ಪ್ರತಿಗಳು ಕಛೇರಿಯಲ್ಲಿ 6-11-2021 ರಿಂದ ಸದಸ್ಯರಿಗೆ ಲಭ್ಯವಿರುತ್ತದೆ.

1. 2020-21ನೇ ಸಾಲಿನ ಆಡಳಿತ ಮಂಡಲಿಯ ವರದಿ
2. 2020-21ನೇ ಸಾಲಿನ ಶಾಸನ ಬದ್ಧ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿ.
3. ದಿನಾಂಕ: 19-12-2020 ರಂದು ನಡೆದ ಸಾಮಾನ್ಯ ಸಭೆಯ ನಡಾವಳಿ.
4. 2020-21ನೇ ಸಾಲಿನ ಆರ್ಥಿಕ ತಃಖ್ತೆಗಳು

# SRI RATHNA CREDIT CO-OPERATIVE SOCIETY LIMITED

Sy. No.26/5, First Floor, New Bank Colony, Amruth Nagar Main Road, Konankunte,Banglore-560062.
Ph No: 080-26324649 Email: srirathna0318@gmail.com srirathnacooperativesociety@gmail.com
Website:www.srirathnacreditsociety.com

## NOTICE OF 4th ANNUAL GENERAL MEETING OF MEMBERS (VERTUAL MEETING)

The 4th Annual General Meeting of the Sri Rathna Credit Co-operative Society Limited is scheduled to be held on **Saturday 13th November 2021** at **10.30 AM** to consider the following Agenda. All the Members are request to log on to the Virtual Meeting.

**Sri K.B Lakshman, President of the Society will preside over the Meeting.**

### AGENDA

1. Invocation
2. Welcome Address
3. To read and record the notice of this Fourth Annual General Meeting.
4. To read and record the proceedings of Third Annual General Meeting held on 19-12-2020.
5. To consider and adopt Annual Report of the Board of Management for the year 2020-21.
6. To consider Budget & Target for the year 2021-22.
7. To consider Appropriation of profit for the year 2020-21.
8. To consider Audit Report along with compliance for the year 2020-21
9. To consider Appointment of Auditor for the year 2021-22.
10. To consider any other Subjects with the permission of the Chairman.
11. Amendment to By Law (if any)
12. Vote of thanks

By order of the Board of Management
Sd/-
J.SANTOSH
Chief Executive I/C

Place: Banglore .
Date: 25-10-2021.

### Please Note:

1. Regular members only can participate in the Meeting.
2. Please have this notice with you at the time of Annual General Meeting.
3. Subjects to be discussed at the Annual General Meeting should be sent to CEO, in writing or by Whatsapp or by Email at least three days before the Annual General Meeting. Subjects received later will not be considered.

## Special Notice:

A booklet giving detailed information about the following will be made available to the Members from 06-11-2021 at the Society Office.

1. Directors Reports for the year 2020-21.
2. Audit Report along with Compliance.
3. Minutes of Annual General Meeting held on 19-12-2020.
4. Statements of accounts for the year 2020-21.

| ಕ್ರಮ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 1 | ಪ್ರಾರ್ಥನೆ | --- |
| 2 | ಸ್ವಾಗತ ಭಾಷಣ | --- |
| 3 | 4ನೇ ಸಭೆಯ ತಿಳುವಳಿಕೆ ಪತ್ರ ಓದಿ ದಾಖಲಿಸುವುದು | 02–04 |
| 4 | 19–12–2020ರಂದು ನಡೆದ 3ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಯನ್ನು ಓದಿ ದಾಖಲಿಸುವುದು | 53–55 |
| 5 | 2020–21ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ | 09–15 |
| 6 | 2021–22ನೇ ಸಾಲಿಗೆ ಆಯವ್ಯಯ ಹಾಗೂ ಗುರಿ ನಿಗದಿಪಡಿಸಿರುವುದರ ಬಗ್ಗೆ ಪ್ರಸ್ತಾವನೆ ಹಾಗೂ ಅನುಮೋದನೆ | 56–57 |
| 7 | 2020–21ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ | 13 |
| 8 | 2020–21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಪರಿಶೀಲಿನೆ, ಅನುಪಾಲನಾ ವರದಿಯೊಂದಿಗೆ ಲೆಕ್ಕ ಪರಿಶೋಧನಾ ವರದಿ | 16–48 |
| 9 | 2021–22ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿಯ ಬಗ್ಗೆ ಪ್ರಸ್ತಾವನೆ | 15 |
| 10 | ಉಪವಿಧಿಗಳ ತಿದ್ದುಪಡಿ | --- |
| 11 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | --- |
| 12 | ವಂದನಾರ್ಪಣೆ | --- |

# SRI RATHNA CREDIT CO-OPERATIVE SOCIETY LIMITED

Sy. No.26/5, First Floor, New Bank Colony, Amruth Nagar Main Road,
Konankunte, Bangalore-560062,Ph No: 080-26324649.
Email:srirathna0318@gmail.com, srirathnacooperativesociety@gmail.com
Website:www.srirthnacreditsociety.com

## RATES OF INTEREST ON TERM DEPOSITS

| Particulars | General | Senior citizen |
|---|---|---|
| For 6 Months | 5% | 5% |
| More than 6 Months, less than 12 Months | 6% | 6.5% |
| 12 Months & above , less than 2 Years | 7% | 7.5% |
| For 2 years, less than 3 years | 7.5% | 8% |
| For 3 Years and Above | 8% | 8.5% |

- **RECURRING DEPOSIT / MONTHLY DEPOSIT**
  ***FOR 1, 2 & 3 YEARS @ 6%, 7% & 8% respectively.***
- **MEMBERS SAVINGS ACCOUNT 5% P.A**

| MAXIMUM RATE OF INTEREST |
|---|
| • ***5 % ON SAVING DEPOSIT*** |
| • ***8.5% ON TERM DEPOSITS*** |

# SRI RATHNA CREDIT CO-OPERATIVE SOCIETY LIMITED

Sy. No.26/5, First Floor, New Bank Colony, Amruth Nagar Main Road,
Konankunte, Bangalore-560062.Ph No: 080-26324649.
Email:srirathna0318@gmail.com, srirathnacooperativesociety@gmail.com
Website:www.srirthnacreditsociety.com

## RATES OF INTEREST ON LOAN AND ADVANCES

| Particulars | ROI |
|---|---|
| Personal Loan | 18% |
| Vehicle Loan | 12% |
| Gold Loan | 12% |
| Loan On Deposit | One % Higher than FD Rate |
| Home loan | 12% |
| Business Loan | 13% |
| Mortgage Loan | 14% |

## FINANCIAL POSITION OF THE SOCIETY AS ON 31-03-2021

Amount in Rs.

| | |
|---|---|
| SHARE CAPITAL | 41,78,485 |
| DEPOSITS | 8,00,09,700 |
| ADVANCES | 3,98,13,386 |
| CD RATIO | 50% |
| PROFIT | 21,55,527 |
| TOTAL BUSINESS | 11,98,23,086 |
| OVERDUE(AMOUNT) | 40,74,693 |
| OVERDUE % | 10% |

# SRI RATHNA CREDIT CO-OPERATIVE SOCIETY LIMITED

Sy. No.26/5, First Floor, New Bank Colony, Amruth Nagar Main Road,
Konankunte, Bangalore-560062.Ph No: 080-26324649.
Email:srirathna0318@gmail.com, srirathnacooperativesociety@gmail.com
Website:www.srirthnacreditsociety.com

## SERVICES AVAILABLE:

**Deposits:**

1. Members Savings A/c
2. Current A/c
3. Pigmy Deposits A/c
4. Fixed Deposits A/c
5. Recurring Deposits A/c
6. Re-Investment Deposit
7. Daily Deposits Scheme
8. E- Stamping

**Loans & Advances**

1. Personal Loan
2. Vehicle Loan
3. Gold Loan
4. Loan on Deposit
5. Home loan
6. Business Loan
7. Mortgage Loan
8. Over Draft Loan On Deposits

**ಶಾಸನ ಬದ್ಧ ಲೆಕ್ಕ ಪರಿಶೋಧಕರು 2020-21 ನೇ ಸಾಲಿಗೆ ನಿಮ್ಮ ಸಂಘವನ್ನು ಆಡಿಟ್ 'ಎ' ಎಂದು ವರ್ಗೀಕರಿಸಿದ್ದಾರೆಂದು ತಿಳಿಸಲು ಸಂತಸ ವ್ಯಕ್ತ ಪಡಿಸುತ್ತೇವೆ.**

| WORKING HOURS |
| --- |
| Morning: Mon to Sat: 9:30 to 1:00 PM |
| Evening: Mon to Sat: 2:00 to 4:00 PM |
| Lunch Break:1:00 PM to 2:00 PM |

**All Second Saturdays Holiday**
**All Sunday Weekly off**

**ಸರ್ವೆ ನಂ: 26/5, ಮೊದಲನೇ ಮಹಡಿ, ನ್ಯೂ ಬ್ಯಾಂಕ್ ಕಾಲೋನಿ, ಅಮೃತನಗರ ಮುಖ್ಯ ರಸ್ತೆ, ಕೋಣನಕುಂಟೆ, ಬೆಂಗಳೂರು-560062**

## 2020-21ನೇ ಸಾಲಿನ ಆಡಳಿತ ಮಂಡಲಿಯ ವರದಿ

ಸನ್ಮಾನ್ಯ ಸದಸ್ಯರೆ,

ನಿಮ್ಮ ಶ್ರೀ ರತ್ನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಇದರ ನಾಲ್ಕನೇ ವಾರ್ಷಿಕ ಸಾಮಾನ್ಯ ಸಭೆ (ವರ್ಚುಯಲ್ ಸಭೆ) ದಿನಾಂಕ:13-11-2021 ಬೆಳಗ್ಗೆ 10.30ಕ್ಕೆ ಸರಿಯಾಗಿ ಕರೆಯಲಾಗಿದೆ. ತಮ್ಮೆಲ್ಲರನ್ನು ಆಡಳಿತ ಮಂಡಲಿಯು ಈ ವಾರ್ಷಿಕ ಸಭೆಗೆ ಹಾರ್ದಿಕವಾಗಿ ಸ್ವಾಗತಿಸುತ್ತದೆ. ತಮಗೆಲ್ಲಾ ತಿಳಿದಿರುವಂತೆ ಕೋವಿಡ್-19, ಮಹಾಮಾರಿ 2020-21ನೇ ಸಾಲಿನ ಇಡೀ ವರ್ಷ ದೇಶದ ಆರ್ಥಿಕತೆಯ ಮೇಲೆ, ಜನಜೀವನದ ಮೇಲೆ, ಪ್ರಭಾವ ಬೀರಿತು ನಂತರದಲ್ಲಿ ಬಂದ ಈ ಮಹಾಮಾರಿಯ ಎರಡನೇ ಅಲೆ ನಿಜಕ್ಕೂ ಕಂಗೆಡಿಸಿತು ಇದಕ್ಕೆ ಸಹಕಾರಿ ಕ್ಷೇತ್ರವೂ ಸಹ ಹೊರತಾಗಿರಲಿಲ್ಲ. ಇದೆಲ್ಲದರ ನಡುವೆಯೂ, ನಿಮ್ಮ ಸಂಘವು ಬಹುತೇಕ ಎಲ್ಲಾ ವಿಭಾಗಗಳಲ್ಲಿ ಪ್ರಗತಿ ಸಾಧಿಸಿರುವುದು ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಪೂರಕವಾಗಿ, ಈ ವರದಿಯ ಮುಂದಿನ ಪುಟಗಳಲ್ಲಿ ಅಂಕಿ ಅಂಶಗಳನ್ನು ನೀಡಲಾಗಿದೆ. **ಪ್ರಸಕ್ತ ವರ್ಷದಲ್ಲಿ ಸನ್ನದು ಲೆಕ್ಕ ಪರಿಶೋಧಕರು ನಿಮ್ಮ ಸಂಘಕ್ಕೆ ಆಡಿಟ್ 'ಎ' ಎಂದು ವರ್ಗೀಕರಿಸಿದ್ದಾರೆಂದು ತಿಳಿಸಲು ಹರ್ಷಿಸುತ್ತೇವೆ. ಸಂಘದ ಅಭಿವೃದ್ಧಿಗೆ ಸಂಘದ ಸದಸ್ಯರುಗಳ ಪಾತ್ರ ಹಿರಿದು ಎಂಬುದರಲ್ಲಿ ಸಂಶಯವಿಲ್ಲ.**

ಸನ್ಮಾನ್ಯ ಸದಸ್ಯರು ಇದನ್ನು ಮನಗಂಡು ಎಂದಿನಂತೆ ಸಹಕರಿಸಬೇಕಾಗಿ ಪ್ರಾರ್ಥನೆ.

### 1. ನಿರ್ದೇಶಕ ಮಂಡಲಿ:

ಶ್ರೀಯುತರಾದ

1. ಕೆ.ಬಿ.ಲಕ್ಷ್ಮಣ್ – ಅಧ್ಯಕ್ಷರು
2. ಎಲ್.ಶ್ರೀಧರ್ – ಉಪಾಧ್ಯಕ್ಷರು

ನಿರ್ದೇಶಕರು

ಶ್ರೀಯುತರಾದ

3. ಕೆ.ಅರುಣ್ ಕುಮಾರ್
4. ಶ್ರೀಮತಿ ಬಿ.ಭಾಗ್ಯ
5. ಸಿ.ಚಂದ್ರಶೇಖರ್
6. ಎಲ್.ಕುಮಾರ್
7. ಎನ್.ಕಿರಣ್
8. ಎಲ್.ಮಂಜುನಾಥ

9. ಸಿ.ಎಂ. ಮಂಜುನಾಥ್ 19-11-2020 ದಿನಾಂಕದಿಂದ.
10. ಜಿ.ನಾಗರಾಜ್
11. ಎಲ್.ರವಿ
12. ಶ್ರೀಮತಿ ಎನ್.ಸವಿತ
13. ಜಿ.ಯದುನಂದನ್

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 29(ಇ) ಹಾಗೂ ಸಂಘದ ಉಪನಿಯಮ 55(1)(2)ರ ಅನುಸಾರ ಶ್ರೀ ಮುನಿರಾಜು ಟಿ ಅವರು (ಸದಸ್ಯತ್ವ 1076) ಅವರ ನಿರ್ದೇಶಕತ್ವದ ಸ್ಥಾನಕ್ಕೆ ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ರಾಜಿನಾಮೆಯನ್ನು ಸಲ್ಲಿಸಿದರು. ಅವರ ಸ್ಥಾನವನ್ನು ಕಾನೂನು ರೀತ್ಯ ಶ್ರೀಯುತ ಮಂಜುನಾಥ್ ಸಿ.ಎಂ. (ಸದಸ್ಯತ್ವ ಸಂಖ್ಯೆ 1524) ಅವರನ್ನು ಆಡಳಿತ ಮಂಡಲಿಯ ಬಾಕಿ ಉಳಿದಿರುವ ಅವಧಿಗೆ 19-11-2020 ದಿನಾಂಕದಿಂದ ನಾಮ ನಿರ್ದೇಶನ ಮಾಡಲಾಯಿತು.

ವರದಿ ಸಾಲಿನಲ್ಲಿ ಆಡಳಿತ ಮಂಡಲಿಯು 10 ಬಾರಿ ಸಭೆ ಸೇರಿ, ಠೇವಣಿಗಳ ಸಂಗ್ರಹ, ಸಾಲಮುಂಗಡಗಳ ಮಂಜುರಾತಿ, ವಸೂಲಾತಿ ಕ್ರಮಗಳು, ಸಂಘದ ಆಡಳಿತ, ಅಭಿವೃದ್ಧಿ, ಸಾಧಿಸಬೇಕಾಗಿರುದ ಗುರಿ, ಇತ್ಯಾದಿಗಳ ಬಗ್ಗೆ ಕೂಲಂಕಶವಾಗಿ ಚರ್ಚಿಸಿ, ಸೂಕ್ತ ನಿರ್ಧಾರಗಳನ್ನು ಆಗಿಂದಾಗ್ಗೆ ಕೈಗೊಂಡು ಕಾರ್ಯ ರೂಪಕ್ಕೆ ತರುವಲ್ಲಿ ಯಶಸ್ವಿಯಾಗಿದೆ.

ಪ್ರಸಕ್ತ ಹಾಗೂ ಹಿಂದಿನ ಸಾಲುಗಳ ತುಲನಾತ್ಮಕ ಅಂಕಿ ಅಂಶಗಳನ್ನು ಪರಿಶೀಲಿಸಿ, ಮುಂಬರುವ ವರ್ಷಗಳಲ್ಲಿ ಸಾಧಿಸಬೇಕಾದ ಪ್ರಗತಿಯನ್ನು ಮನಗಂಡು, ನಿರ್ದಿಷ್ಟ ಗುರಿಯನ್ನು ರೂಪಿಸಿ, ಅದನ್ನು ತಲುಪಲು ಎಲ್ಲಾ ರೀತಿಯ ಕ್ರಮ ಕೈಗೊಳಲಾಗ್ಗುವುದು ಎಂದು ತಿಳಿಸಲು ಇಚ್ಛಿಸುತ್ತೇವೆ..

## 2. ಸಾಲ ಉಪಸಮಿತಿ

ಶ್ರೀಯುತರಾದ

1. ಕೆ.ಬಿ.ಲಕ್ಷ್ಮಣ್- ಅಧ್ಯಕ್ಷರು.
2. ಜಿ. ನಾಗರಾಜ್-ಸದಸ್ಯರು.
3. ರವಿ.ಎಲ್ -ಉಪಾಧ್ಯಕ್ಷರು
4. ಕುಮಾರ್.ಎಲ್-ಸದಸ್ಯರು

ವರದಿ ಸಾಲನಲ್ಲಿ ಸಾಲ ಉಪಸಮಿತಿಯು 8 ಬಾರಿ ಸಭೆ ಸೇರಿ, ಸಾಲದ ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಸಾಲಗಾರರು, ಜಾಮೀನುದಾರರು, ಸಾಲಕ್ಕೆ ನೀಡಿದ ಭದ್ರತೆ, ಅವುಗಳ ಮೌಲ್ಯ, ದಾಖಲಾತಿಗಳ ನಿಖರತೆ, ಸಲಹೆಗಾರರ ವರದಿ, ಆದಾಯದ ಮೂಲ, ಮರು ಪಾವತಿ ಸಾಮರ್ಥ್ಯ ಮುಂತಾದ ವಿವರಗಳನ್ನು ಪರಿಶೀಲಸಿ ಸಾಲಗಳನ್ನು ಮಂಜೂರು ಮಾಡಲಾಗುತ್ತಿದೆ. 2020-21 ರಲ್ಲಿ ಕೋವಿಡ್-19 ನಿಂದಾಗಿ ಸಾಲ ಮರುಪಾವತಿಯಲ್ಲಿ ಸ್ವಲ್ಪ ವಿಳಂಬವಾಗಿದ್ದರೂ ಸಹ ಪ್ರಸಕ್ತ ಸಾಲಿನಲ್ಲಿ ಮರುಪಾವತಿ ಪ್ರಗತಿಯಲ್ಲಿದೆ.

## 3. ಆರ್ಥಿಕ ಫಲಿತಾಂಶಗಳು

ಲಕ್ಷ ರೂಗಳಲ್ಲಿ

| ಕ್ರಮ ಸಂಖ್ಯೆ | ವಿವರ | 2020-21ಕ್ಕೆ ಹೊಂದಲಾಗಿದ್ದ ಗುರಿ | 2020-2021ರ ಸಾಧನೆ |
|---|---|---|---|
| 1 | ಷೇರು ಬಂಡವಾಳ | 46 | 42 |
| 2 | ಠೇವಣಿಗಳು | 1000 | 800 |
| 3 | ಸಾಲದ ವಿತರಣೆ | 750 | 398 |
| 4 | ಲಾಭ | 29 | 21 |
| 5 | ದುಡಿಯುವ ಬಂಡವಾಳ | 1074 | 864 |
| 6 | ಸಾಲಠೇವಣಿ ಅನುಪಾತ | 75% | 50% |

## 4. ಸದಸ್ಯರ ಷೇರು ಬಂಡವಾಳ

ವರ್ಷದ ಪ್ರಾರಂಭದಲ್ಲಿ ಷೇರು ಖಾತೆಯಲ್ಲಿ ರೂ40,90,385 ಇದ್ದು, ಪ್ರಸಕ್ತ ವರ್ಷದಲ್ಲಿ ರೂ. 88,100 ಹೆಚ್ಚು ಸಂಗ್ರಹವಾಗಿ ವರ್ಷದ ಕೊನೆಯಲ್ಲಿ ರೂ.41,78,485 ಇರುತ್ತದೆ. ಇದು ಕಳೆದ ಸಾಲಿಗೆ ಹೋಲಿಸಿದರೆ, ಶೇ.2.15% ಹೆಚ್ಚಾಗಿರುತ್ತದೆ.

## 5. ಠೇವಣಿ ಸಂಗ್ರಹಣೆ

ಕಳೆದ ಸಾಲಿನಲ್ಲಿ (2019-20) ಠೇವಣಿ ಸಂಗ್ರಹಣೆ ರೂ. 7,70,19,399 ಗಳಾಗಿದ್ದವು. ಪ್ರಸಕ್ತ ಸಾಲಿನಲ್ಲಿ ರೂ 8,00,09,700 ರೂಗಳಿದ್ದು, ರೂ. 29,90,301 ಗಳಷ್ಟು ಹೆಚ್ಚುವರಿ ಸಂಗ್ರಹವಾಗಿದ್ದು, ಇದು ಕಳೆದ ಸಾಲಿಗಿಂತ ಶೇ 4 ರಷ್ಟು ಹೆಚ್ಚಾಗಿರುತ್ತದೆ.

## 6. ಹೂಡಿಕೆಗಳು:

ಪ್ರಸಕ್ತ ಸಾಲಿನಲ್ಲಿ ಸಂಘವು, 1.5 ಕೋಟಿ ರೂಗಳನ್ನು ಈ ಕೆಳಕಂಡಂತೆ ಹೂಡಿಕೆಮಾಡಲಾಗಿದೆ.

| ಕ್ರಮ ಸಂಖ್ಯೆ | ಬ್ಯಾಂಕಿನ ಹೆಸರು | ಖಾತೆ ಸಂಖ್ಯೆ | ಮೊಬಲಗು |
|---|---|---|---|
| 1 | ಬ್ಯಾಂಕ್ ಆಫ್ ಬರೋಡ | 47340200000240 | 50,00,000/- |
| 2 | ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ | 200200001892 | 100,00,000/- |

2019-20ನೇ ಸಾಲಿನಲ್ಲಿ ಸಂಘವು ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ 3 ಕೋಟಿ ರೂ.ಗಳನ್ನು ಸಂಘವು ಹೂಡಿಕೆ ಮಾಡಲಾಗಿದೆ. ಹಣವನ್ನು ಹೂಡಿಕೆ ಮಾಡುವ ಮುನ್ನ, ಬ್ಯಾಂಕ್ ಸಧೃಡವಾಗಿರುವುದನ್ನು ಗಣನೆಗೆ ತೆಗೆದುಕೊಂಡು ಹಾಗೂ ಇತರ ಬ್ಯಾಂಕ್‌ಗಳಿಗೆ ಹೋಲಿಸಿದರೆ, ಹೆಚ್ಚುವರಿಯನ್ನು ಬಡ್ಡಿಯನ್ನು ನೀಡುತ್ತಿದ್ದ ಕಾರಣ ಹೂಡಿಕೆ ಮಾಡಲಾಯಿತು.

ವರದಿಗಳ ಪ್ರಕಾರ ಶ್ರೀ ಗುರು ರಾಘವೇಂದ್ರ ಬ್ಯಾಂಕಿನ ವ್ಯವಹಾರಗಳು ಅಷ್ಟು ಸಮರ್ಪಕವಾಗಿ ನಡೆದಿಲ್ಲ ಎನ್ನುವ ಕಾರಣಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸದರಿ ಬ್ಯಾಂಕಿನ ಮೇಲೆ ಕೆಲವು ನಿಬಂಧನೆಗಳನ್ನು(Section 35A of Banking Regulation Act ) ಹೇರಿತು ಹಾಗೂ ಸರ್ಕಾರಿ ಇಲಾಖೆಯ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಿತು. ತದನಂತರ, ಸಾರ್ವಜನಿಕ ವಲಯದ ಬ್ಯಾಂಕೊಂದರ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಿತು. ಈ ಮಧ್ಯೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಬಂಧನೆಗಳನ್ನು ಗ್ರಾಹಕರ ಹಿತ ದೃಷ್ಟಿಯಿಂದ ಜುಲೈ 2021 ರಿಂದ ಜನವರಿ 2022 ರವರೆ ಮುಂದುವರೆಸಲಾಗಿದೆ.

2019–2020 ಮತ್ತು 2020–2021ನೇ ಸಾಲಿಗೆ ಶ್ರೀ ಗುರು ರಾಘವೇಂಧ್ರ ಬ್ಯಾಂಕಿನಿಂದ ಬರಬೇಕಾದ ಹೂಡಿಕೆಗಳ ಮೇಲಿನ ಬಡ್ಡಿ ಹಣವನ್ನು ಲೆಕ್ಕಕ್ಕೆ ತೆಗೆದುಕೊಂಡು ಲಾಭ/ನಷ್ಟದ ತಃಖ್ತೆ ಮತ್ತು ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಲಾಗಿದೆ.

ಸದರಿ ಬ್ಯಾಂಕಿನಲ್ಲಿರುವ ಬಡ್ಡಿ ಹಣ ರೂ. 23,85,640/-ಮತ್ತು ಮೆಚ್ಯೂರಿಟಿ ಆಗಿರುವ 2 ಕೋಟಿ ರೂ.ಗಳನ್ನು ಸಂಘದ ಉಳಿತಾಯ ಖಾತೆಗೆ ಜಮಾ ಮಾಡಿದ್ದಾಗ್ಯೂ ಸಹ, ಈ ಹಣವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಸದರಿ ಬ್ಯಾಂಕಿನ ಮೇಲೆ ಹಾಕಿರುವ ನಿರ್ಬಂಧವನ್ನು ತೆಗೆಯುವ ತನಕ ಹಿಂಪಡೆಯುವ ಹಾಗಿಲ್ಲ.

ಸದರಿ ಬ್ಯಾಂಕಿನಲ್ಲಿ ಹೂಡಿಕೆ ಮಾಡಿರುವ ನಿಶ್ಚತ ಠೇವಣಿ, 24 ತಿಂಗಳುಗಳಾಗಿದ್ದು, ದಿನಾಂಕ: 8/10/2021 ರಂದು ಅವಧಿ ಮುಗಿಯುತ್ತದೆ. ಶೇಕಡ 9ರ ಬಡ್ಡಿ ದರ ಮಾಹೆಯಾನ ರೂ.75,000/- ಸಂಘದ ಉಳಿತಾಯ ಖಾತೆಗೆ ಜಮಾ ಮಾಡಲಾಗುತ್ತಿದೆ. ಉಳಿದ 2 ಕೋಟಿ ರೂಗಳ ಅಲ್ಪಾವಧಿ ಠೇವಣಿಯ,(181 ದಿನಗಳು) ಮೆಚ್ಯೂರಿಟಿ ಆದ ನಂತರ (2,00,00,000/-) ಅಸಲು ಮತ್ತು ಬಡ್ಡಿಯನ್ನು ಸಂಘದ ಉಳಿತಾಯ ಖಾತೆಗೆ 15/06/2020 ರಂದು ಜಮಾ ಮಾಡಲಾಗಿದೆ.

ಬ್ಯಾಂಕಿನ ಪುನರುಜ್ಜೀವನದ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿದು ಬಂದಿರುತ್ತದೆ.

## 7. ಅಧಿಕ ವೆಚ್ಚದ ಅನುಮೋದನೆ

ಪೂಜಾ ವೆಚ್ಚವನ್ನು ಹೊರತುಪಡಿಸಿ, ಮಿಕ್ಕೆಲ್ಲ ವೆಚ್ಚಗಳು, ಆಯವ್ಯಯ ಅಂದಾಜಿಗಿಂತ ಕಡಿಮೆ ಇರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇವೆ.

2020–2021ನೇ ಸಾಲಿನ ಅಂದಾಜಿಸಲಾದ ಪೂಜಾ ವೆಚ್ಚ ರೂ.6,000/- ಇದ್ದು ಹೆಚ್ಚುವರಿಯಾಗಿ ಖರ್ಚಾಗಿರುವ ಮೊತ್ತ ರೂ.2,340/- ಆಗಿರುತ್ತದೆ. ಒಟ್ಟು ರೂ. 8340/- ಇದಕ್ಕೆ ಕಾರಣ ಹೂ ಮತ್ತು ಪೂಜಾ ಸಾಮಗ್ರಿಗಳ ಬೆಲೆ ಹೆಚ್ಚಳವಾದದ್ದು.

## 8. ಲಾಭ ಗಳಿಕೆ

ವರದಿ ಸಾಲಿನಲ್ಲಿ ಸಂಘವು ರೂ. 21,55,527/-ಲಾಭವನ್ನು ಗಳಿಸಿದೆ. ವರ್ಷ ಪೂರ್ತಿ, ಕರೋನಾಘಾತದ ತೀವ್ರತೆಯಲ್ಲಿ ನಿಮ್ಮ ಸಂಘವು 21 ಲಕ್ಷಕ್ಕೂ ಹೆಚ್ಚು ಲಾಭ ಗಳಿಸಿರುವುದು ಹೆಮ್ಮೆಯ ವಿಷಯವಾಗಿದೆ.

## 9. ಲಾಭಾಂಶದ ವಿತರಣೆ

**2020–21ನೇ ಸಾಲಿನ ನಿವ್ವಳ ಲಾಭವು ರೂ.21,,55,527/ರೂಗಳಿದ್ದು, ಅದನ್ನು ಈ ಕೆಳಕಂಡಂತೆ ವಿನಿಯೋಗಿಸಲಾಗಿದೆ.**

ನಿಯಮಾನುಸಾರ 2020-21 ನೇ ಸಾಲಿನ ನಿವ್ವಳ ಲಾಭದ ವಿನಿಯೋಗ.

| ಕ್ರಮ ಸಂಖ್ಯೆ | ನಿಧಿಗಳು | 2020-21ನೇ ಸಾಲಿನಲ್ಲಿ ರೂ. | |
|---|---|---|---|
| 1 | ಮೀಸಲು ನಿಧಿ | 39% | 8,34,498 |
| 2 | ಸಹಕಾರ ಶಿಕ್ಷಣ ನಿಧಿ | 2% | 32,333 |
| 3 | ಹೋಕು ಬಾಕು ನಿಧಿ | 10% | 1,58,431 |
| 4 | ಕಟ್ಟಡ ನಿಧಿ | 15% | 2,13,882 |
| 5 | ಸದಸ್ಯರ ಕ್ಷೇಮ ನಿಧಿ | 10% | 1,21,200 |
| 6 | ಧರ್ಮ ನಿಧಿ | 10% | 1,09,080 |
| 7 | ಸದಸ್ಯರ ಮರೋಣೋತ್ತರ ನಿಧಿ | 15% | 1,47,258 |
| 8 | ಸಿಬ್ಬಂದಿ ಬೋನಸ್/ex-gratia | 5% | 41,723 |
| 9 | ಲಾಭಾಂಶ ಸಮೀಕರಣ ನಿಧಿ | 10% | 79,274 |
| 10 | ಲಾಭಾಂಶ | 10% | 417,848 |
| | **ಒಟ್ಟು** | | **21,55,527** |

## 10. ಗುರುತಿನ ಚೀಟಿ

ಗುರುತಿನ ಚೀಟಿಯನ್ನು ಸದಸ್ಯರಿಗೆ ವಿತರಿಸುವುದು ಮತ್ತು ಸದಸ್ಯರು ಅದನ್ನು ಪಡೆಯುವುದು ಕಾನೂನಿನನ್ವಯ ಅವಶ್ಯವಾಗಿರುತ್ತದೆ. ಈಗಾಗಲೇ ಗುರುತಿನ ಚೀಟಿಯನ್ನು ಪಡೆಯದೇ ಇದ್ದ ಸದಸ್ಯರು ಸಂಘದ ಕಛೇರಿಯಲ್ಲಿ ಗುರುತಿನ ಚೀಟಿಯನ್ನು ಪಡೆಯಬೇಕಾಗಿ ಪ್ರಾರ್ಥನೆ.

ಮುಂಬರುವ ಸರ್ವಸದಸ್ಯರ ಸಭೆಗೆ ಹಾಜರಾಗುವುದಕ್ಕೆ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ

## 11. ಷೇರು ಪ್ರಮಾಣ ಪತ್ರ

ಸಂಘದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ ಹಾಗೂ ಸದಸ್ಯತ್ವವನ್ನು ನೀಡಲಾದ ಎಲ್ಲಾ ಸದಸ್ಯರು ಸಂಘದ ಕಛೇರಿಯಿಂದ ನೀಡಲಾಗುವ ಷೇರು ಪ್ರಮಾಣ ಪತ್ರವನ್ನು ತಪ್ಪದೇ ಪಡೆಯಬೇಕಾಗಿ ಪ್ರಾರ್ಥಿಸುತ್ತೇವೆ.

## 12. ಸಂಘದಲ್ಲಿ ಲಭ್ಯವಿರುವ ಸೇವೆಗಳನ್ನು ಸದಸ್ಯರು ಉಪಯೋಗ ಪಡೆಯುವ ಬಗ್ಗೆ

ತಮಗೆ ಈ ಹಿಂದೆ ತಿಳಿಸಿರುವಂತೆ, ಕರ್ನಾಟಕ ಸರ್ಕಾರ ಅಧಿನಿಯಮ 1959ರಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಸದಸ್ಯರು ವಾರ್ಷಿಕ ಸಭೆಯಲ್ಲಿ ಹಾಜರಿರುವುದು ಹಾಗೂ ಸಹಕಾರ ಸಂಘವು ನೀಡಲಾಗುವ ಕನಿಷ್ಟ ಪ್ರಮಾಣದ ಸೇವೆಗಳನ್ನು [illegible] ಕಾನೂನು ರೀತ್ಯಾ ಕಡ್ಡಾಯವಾಗಿರುತ್ತದೆ.

ಆದ್ದರಿಂದ ಸಂಘದಲ್ಲಿ ಲಭ್ಯವಿರುವ ಸೇವೆ/ ಸೌಲಭ್ಯಗಳನ್ನು ಉಪಯೋಗಿಸಿ ಕೊಳ್ಳಬೇಕೆಂದು, ನಮ್ಮ ಎಲ್ಲಾ ಸದಸ್ಯರಲ್ಲಿ ವಿನಂತಿಸಲಾಗಿದೆ.

**13. ಸೇವೆಗಳ ವಿವರ**

- **ವಿವಿಧ ಠೇವಣಿಗಳು**
  - **ಸದಸ್ಯರ ಉಳಿತಾಯ ಖಾತೆ (Members Savings Account)**
  - **ನಿಶ್ಚಿತ ಠೇವಣಿ (Fixed Deposit)**
  - **ಆವರ್ತಕ ಠೇವಣಿ (Recurring Deposit)**
  - **ಮರುಹೂಡಿಕೆ ಠೇವಣಿ (Re-investment Deposit)**
  - **ನಗದು ಪತ್ರಗಳು (Cash Certificate)**
  - **ಪಿಗ್ಮಿ ಠೇವಣಿ(Pigmy Deposit)**
  - **ಇ-ಸ್ಟ್ಯಾಂಪಿಂಗ್ ಸೌಲಭ್ಯ (E-Stamping Facility)**

**14.** ಸ್ವತಃ ಹಣ ಹಿಂಪಡೆಯುವ ಸಲುವಾಗಿ 10 ಹಾಳೆಗಳ Withdrawal Slip ನ್ನು, ನಮ್ಮ ಉಳಿತಾಯ ಖಾತೆ ಉಳ್ಳವರಿಗೆ, ನೀಡಲಾಗುತ್ತಿದೆ. ಇದರಿಂದ ತಮ್ಮ ಖಾತೆಯಿಂದ, ಹಣವನ್ನು ಹಿಂಪಡೆಯಲು, ಉಪಯೋಗಿಸಬಹುದಾಗಿದ್ದು ಉಳಿತಾಯ ಖಾತೆದಾರರು, ಈ ಸೌಲಭ್ಯವನ್ನು ಉಪಯೋಗಿಸಿ ಕೊಳ್ಳಬೇಕಾಗಿ ಪ್ರಾರ್ಥನೆ.

**15. ಸಾಲ ಸೌಲಭ್ಯಗಳು**

1. ವೈಯಕ್ತಿಕ ಸಾಲ (Personal Loan)
2. ಅಡಮಾನ ಸಾಲ (Mortgage Loan)
3. ನಿವೇಶನ ಸಾಲ (Site Loan)
4. ಗೃಹ ಸಾಲ (Home Loan)
5. ವಾಹನ ಸಾಲ (Vehicle Loan)
6. ಚಿನ್ನಾಭರಣ ಸಾಲ (Gold Loan)
7. ಠೇವಣಿ ಮೇಲಿನ ಸಾಲ (Loan on Deposit)
8. ಮೀರಳತೆ ಸಾಲ (Overdraft on Deposit)
9. ಅವಧಿ ಸಾಲ/ ಉಪಕರಣ ಸಾಲ (Term Loan / Equipment Loan)

ಈ ನಮ್ಮ ಸಂಘವು ಸ್ಥಾಪನೆಯಾಗಿ ಮೂರು ವರ್ಷ ಕಳೆದಿದೆ. ಅನೇಕ ಮಹನೀಯರುಗಳು, ನಮ್ಮ ಸಂಸ್ಥೆಯ ಸ್ಥಾಪನೆ ಹಾಗೂ ಅದರ ಅಭಿವೃದ್ಧಿಗೆ ನೆರವಾಗಿದ್ದಾರೆ. ವಿಶೇಷವಾಗಿ ಸಹಕಾರ ಇಲಾಖೆ, ಸನ್ಮಾನ್ಯ ನಿಬಂಧಕರು ಮತ್ತು ಇಲಾಖೆಯ ಇನ್ನಿತರ

ಪದಾಧಿಕಾರಿಗಳು, ಸದಸ್ಯರು ಕಾರಣರಾಗಿದ್ದಾರೆ. ಕೇವಲ ಮೂರು ವರ್ಷದ ಅವಧಿಯಲ್ಲಿ ಯಶಸ್ಸನ್ನು ಸಾಧಿಸುವಲ್ಲಿ ಎಲ್ಲರ ಸಹಕಾರ, ಹಾರೈಕೆ ಮತ್ತು ಬೆಂಬಲ ಮುಖ್ಯ ಕಾರಣವಾಗಿರುತ್ತದೆ.

**ಆಂತರಿಕ ಲೆಕ್ಕ ಪರಿಶೋಧನೆ**

ಸಂಘದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಭಾರತೀಯ ಸ್ಟೇಟ್ ಬ್ಯಾಂಕಿನ ವಿಭಾಗೀಯ ಕಛೇರಿಯಲ್ಲಿ (Zonal Manager) ನಿವೃತ್ತರಾಗಿ ಅಪಾರ ಅನುಭವವಿರುವ ಶ್ರೀ ದತ್ತಾತ್ರೇಯ ವಿ ಹೆಗಡೆಯವರು ಆಗಿಂದಾಗ್ಗೆ ನಿರಂತರವಾಗಿ ನಿರ್ವಹಿಸುತ್ತಿದ್ದಾರೆ. ಆದುದರಿಂದಾಗಿ, ಲೆಕ್ಕ ಪತ್ರಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬರದ ಹಾಗೆ ನಿಗಾ ವಹಿಸಲಾಗಿದೆ.

**ಶಾಸನ ಬದ್ಧ ಲೆಕ್ಕ ಪರಿಶೋಧನೆ**

ಪ್ರಸ್ತುತ ಸಾಲಿನ ಶಾಸನ ಬದ್ದ ಲೆಕ್ಕ ಪರಿಶೋಧನೆಯನ್ನು ಮೆ. ಸುಧಾಕರ್ ಪೈ ಅಸೋಸಿಯೇಟ್ಸ್ ಇದರ ಪಾಲುದಾರರಾದ CA ಶ್ರೀ ಮಲ್ಲೇಶ್ ಹುಲ್ಲಟ್ಟಿ ಅವರು ಸಕಾಲದಲ್ಲಿ ಲೆಕ್ಕ ಪರಿಶೋಧನೆಯನ್ನು ನಡೆಸಿ ಕೊಟ್ಟಿರುತ್ತಾರೆ. ಅವರಿಗೆ ನಮ್ಮ ಸದಸ್ಯರ ಪರವಾಗಿ ಹಾಗೂ ನಿರ್ದೇಶಕ ಮಂಡಲಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

**2020-21 ನೇ ಸಾಲಿಗೆ ನಿಮ್ಮ ಸಂಘಕ್ಕೆ ಸನ್ನದು ಲೆಕ್ಕ ಪರಿಶೋಧಕರು ಆಡಿಟ್ 'ಎ' ಎಂದು ವರ್ಗೀಕರಿಸಿದ್ದಾರೆಂದು ತಿಳಿಸಲು ಹೆಮ್ಮೆ ಪಡುತ್ತೇವೆ.**

2021-22 ನೇ ಸಾಲಿಗೆ ಶಾಸನ ಬದ್ಧ ಲೆಕ್ಕ ಪರಿಶೋಧನೆಯನ್ನು ನಡೆಸಲು ಮೆ. ಸುಧಾಕರ್ ಪೈ ಅಸೋಸಿಯೇಟ್ಸ್ ಅವರನ್ನು ನೇಮಕಾತಿ ಮಾಡಲು, ಶಿಫಾರಸ್ಸು ಮಾಡಲಾಗಿದೆ.

**ಸಿಬ್ಬಂದಿ ತರಬೇತಿ**

ಸಿಬ್ಬಂದಿ ತರಬೇತಿಗೆ ಸಂಬಂಧಿಸಿದಂತೆ ಸಹಕಾರ / ಬ್ಯಾಂಕಿಂಗ್ ಕ್ಷೇತ್ರದಲಿ 37 ವರ್ಷಗಳ ಅನುಭವಿರುವ ಸಲಹೆಗಾರರು, ನಮ್ಮ ಸಿಬ್ಬಂದಿ ವರ್ಗಕ್ಕೆ on the job ತರಬೇತಿಯನ್ನು ಸತತವಾಗಿ ನೀಡುತ್ತಿದ್ದಾರೆ.

**ವಂದನೆಗಳು**

ನಮ್ಮ ಸಹಕಾರಿ ಸಂಘವು ದಿನಾಂಕ: 10-4-2021 ನೇ ತಾರಿಖಿಗೆ ಮೂರು ವರ್ಷ ತುಂಬಿ, ಯಶಸ್ಸಿನತ್ತ ಮುನ್ನಡೆಯುತ್ತಿದೆ. ಇದಕ್ಕೆ ಕಾರಣ ಸಹಕರಿಸಿದ ಸಹಕಾರ ಇಲಾಖೆ, ಸನ್ಮಾನ್ಯ ನಿಬಂಧಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಸಂಘದ ಸಲಹೆಗಾರರು, ಶಾಸನ ಲೆಕ್ಕ ಪರಿಶೋಧನೆಯನ್ನು ಸಕಾಲದಲ್ಲಿ ನೆರವೇರಿಸಿ ಕೊಟ್ಟ ಸುಧಾಕರ್ ಪೈ ಅಸೋಸಿಯೇಟ್ಸ್. ಹಾಗೂ ಆಂತರಿಕ ಲೆಕ್ಕ ಪರಿಶೋಧನೆಯನ್ನು ಆಗಿಂದ್ದಾಗ್ಯೆ ಮಾಡಿಕೊಟ್ಟ ಶ್ರೀ ದತ್ತಾತ್ರೇಯ ವಿ ಹೆಗಡೆಯವರಿಗೆ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಎಲ್ಲರಿಗೂ ಆಡಳಿತ ಮಂಡಲಿಯು ವಿಶೇಷವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಸಂಘದ ಪ್ರಗತಿಗೆ ಶ್ರಮಿಸಿ ಉತ್ತಮ ಮಾರ್ಗದರ್ಶನ ನೀಡುತ್ತಿರುವ ಆಡಳಿತ ಮಂಡಲಿ ಸದಸ್ಯರು ಹಾಗೂ ಪ್ರಾಮಾಣಿಕವಾಗಿ, ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆ ಸಲ್ಲಿಸುತ್ತಿದ್ದೇವೆ.

ಆಡಳಿತ ಮಂಡಲಿ ಅಪ್ಪಣೆಯ ಮೇರೆಗೆ
ಸಹಿ/-
ಸಂತೋಷ್.ಜೆ
ಮು.ಕಾ.ನಿ. ಅಧಿಕಾರಿ
(ಪ್ರಭಾರ)